**2 ನೇ ಹೆಚ್ಚುವರಿ  ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ಕಡೂರು.**

**ಉಪಸ್ಥಿತರು**

ಶ್ರೀ ಈರಪ್ಪ ಢವಳೇಶ್ವರ್ ಬಿ.ಎ. ಎಲ್.ಎಲ್.ಬಿ,
2 ನೇ ಹೆಚ್ಚುವರಿ  ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ., ಕಡೂರು.

**ಅಸಲು ದಾವಾ ಸಂಖ್ಯೆ:332/2021**

**ದಿನಾಂಕ :   11 ನೇ ಫೆಬ್ರವರಿ 2022**

**ವಾದಿ/ಯರುಃ**

1. ಟಿ.ಆರ್.ಲಕ್ಕಪ್ಪ ಬಿನ್ ಲೇಟ್ ಟಿ.ಎಲ್.ರಾಮಯ್ಯ, 62 ವರ್ಷಗಳು, ವ್ಯವಸಾಯಗಾರರು.
2. ಶ್ರೀಮತಿ ಕಾವೇರಿ ಕೋಂ ಟಿ.ಆರ್.ಲಕ್ಕಪ್ಪ, 52 ವರ್ಷಗಳು, ವ್ಯವಸಾಯಗಾರರು,

ಇಬ್ಬರ  ವಾಸಃತಂಗಲಿ ಗ್ರಾಮ, ಕಸಬಾ ಹೋಬಳಿ, ಕಡೂರು ತಾಲ್ಲೂಕು.

(ಪ್ರತಿನಿಧಿಸುವವರುಃ ಶ್ರೀ ಕೆ.ಆರ್.ಶಿವಶಂಕರಪ್ಪ,  ನ್ಯಾಯವಾದಿಗಳು)

**-ವಿರುದ್ದ-**

**ಪ್ರತಿವಾದಿ/ಯರುಃ**

1. ಬಿ.ಹೆಚ್.ಶಿವಕುಮಾರ್ ಬಿನ್ ಬಿ.ವಿ.ಹಾಲಯ್ಯ, 54 ವರ್ಷಗಳು,  ವಾಸಃಪ್ರಗತಿ ಕೇಬಲ್ ನೆಟ್ ವರ್ಕ್ ಗಾಂಧೀನಗರ, ಭದ್ರಾವತಿ,
2. ಮಂಗಳಾ ಬೆನ್ ಕೋಂ ಲೇಟ್ ವಿ.ಎಂ.ಪಾಟೇಲ್, 59 ವರ್ಷಗಳು, ವಾಸಃ ಗಣೇಶ್ ಸಾಮಿಲ್, ಹೊಸ ಸೇತುವೆ ರಸ್ತೆ, ಭದ್ರಾವತಿ,
3. ಬಿ.ಎಸ್.ರಮೇಶ  ಬಿನ್ ಲೇಟ್ ಬಿ.ವಿ.ಸೀತಾರಾಮ, 41 ವರ್ಷಗಳು,   ವಾಸಃ ಬಸವೇಶ್ವರ ಸರ್ಕಲ್ ಹತ್ತಿರ, ಹಳೇ ನಗರ, ಭದ್ರಾವತಿ,

4. ಮಧು ಎಂ.ಹೆಚ್. ಬಿನ್ ಎಂ.ಹೊನ್ನೂರಪ್ಪ, 40 ವರ್ಷಗಳು, ವಾಸಃ ಶ್ರೀ ಮಹದೇಶ್ವರ ನಿಲಯ, 2 ನೇ ತಿರುವು, ಕನಕ ನಗರ, ಹೊಸ ಸೇತುವೆ ರಸ್ತೆ, ಭದ್ರಾವತಿ,

(ಪ್ರತಿನಿಧಿಸುವವರುಃ ಶ್ರೀ ಸಿ.ವಿ.ಸುಬ್ರಹ್ಮಣ್ಯ, ನ್ಯಾಯವಾದಿಗಳು)

**ಅರ್ಜಿದಾರರುಃ** ಬಿ.ಹೆಚ್.ಶಿವಕುಮಾರ್ ಮತ್ತು ಇತರರು.

**-ವಿರುದ್ದ-**

**ಎದುರುದಾರರುಃ** ಟಿ.ಆರ್.ಲಕ್ಕಪ್ಪ ಮತ್ತು ಇನ್ನೊಬ್ಬರು

**ಃಃ ಮಧ್ಯಂತರ ಅರ್ಜಿ ಸಂಖ್ಯೆ:V ರ ಕುರಿತಾದ ಆದೇಶ ಃಃ**

ಪ್ರಸ್ತುತ ಈ ಮಧ್ಯಂತರ ಅರ್ಜಿ ಸಂಖ್ಯೆ:V ನ್ನು ಪ್ರತಿವಾದಿಯರು ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 7 ನಿಯಮ 11(ಡಿ) ಸಹವಾಚಕ ಕಲಂ 151 ಮತ್ತು ಸಾರ್ವಜನಿಕ ಆವರಣ(ಅನಧಿಕೃತ ನಿವಾಸಿಗಳ ತೆರವು)ಕಾಯಿದೆ 1971 ಕಲಂ 16 ರ ಅಡಿಯಲ್ಲಿ ಸಲ್ಲಿಸಿದ್ದು, ಅರ್ಜಿಯೊಂದಿಗೆ ಲಗತ್ತಿಸಿರುವ ಪ್ರಮಾಣ ಪತ್ರದಲ್ಲಿನ ಅಂಶಗಳನ್ನು ಪರಿಗಣಿಸಿ ವಾದಿಯು ಸಲ್ಲಿಸಿರುವ ದಾವೆಯು ಊರ್ಜಿತವಾಗದೆ ಇರುವುದರಿಂದ ವಾದ ಪತ್ರವನ್ನು ತಿರಸ್ಕರಿಸಬೇಕೆಂದು ಪ್ರಾರ್ಥಿಸಿಕೊಂಡಿರುತ್ತಾರೆ.

2. ಮೇಲ್ಕಂಡ ಮಧ್ಯಂತರ ಅರ್ಜಿ ಸಂಖ್ಯೆ:V ಕ್ಕೆ 1 ನೇ ಪ್ರತಿವಾದಿಯು ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಸದರಿ ಪ್ರಮಾಣ ಪತ್ರದಲ್ಲಿನ ಅಂಶಗಳು ಈ ಕೆಳಕಂಡಂತೆ ಇವೆಃ-

ತಾನು ಈ ಪ್ರಕರಣದ 1 ನೇ ಪ್ರತಿವಾದಿಯಾಗಿದ್ದು, ತನ್ನ ಮತ್ತು ಉಳಿದ ಪ್ರತಿವಾದಿಯರ ಪರವಾಗಿ ಅರ್ಜಿಯನ್ನು ಸಲ್ಲಿಸಿದ್ದು, ವಾದಿಯರು, ಪ್ರತಿವಾದಿಯರ ವಿರುದ್ಧ ಅನ್ಯಂಕ್ರಾಂತದ ವಾಸದ 91 ನಿವೇಶನಗಳಿಗೆ ಸಂಬಂಧಿಸಿದ್ದು, ಸದರಿ ಆಸ್ತಿಯ ಸ.ನಂ.251/1, 251/4, 253/1 ಎ, 253/1 ಬಿ ಮತ್ತು 253/5 ಒಟ್ಟು ವಿಸ್ತೀರ್ಣ 9 ಎಕರೆ 8 ಗುಂಟೆ ಇರುತ್ತದೆ. ಈ ಸಂಗತಿಯನ್ನು ತಾವುಗಳು ಒಪ್ಪಿಕೊಂಡಿದ್ದು, ಮೂಲತಃ 9

ಎಕರೆ 24 ಗುಂಟೆ ಕೃಷಿ ಜಮೀನು ಇದ್ದು, ಸದರಿ ಆಸ್ತಿಯನ್ನು ಮಾನ್ಯ ಜಿಲ್ಲಾಧಿಕಾರಿಗಳು ಆದೇಶ ಸಂ.ಎ 2 ಎಎಲ್ಎನ್-ಸಿಆರ್-73/2015-16 ರಂತೆ ಅನ್ಯಂಕ್ರಾಂತ ಮಾಡಲು ಆದೇಶಿಸಿದ್ದು, ನಂತರ ನಗರ ಯೋಜನಾ ಅಧಿಕಾರಿಗಳು ನೀವೇಶನಗಳನ್ನು ತಯಾರಿಸಿ ಪ್ರತಿಶತ 52% ನಿವೇಶನಗಳು ಮಾಲೀಕರಿಗೆ/ಅಭಿವೃದ್ಧಿಕಾರರಿಗೆ ಮತ್ತು ಪ್ರತಿಶತ 45% ಆಸ್ತಿಯನ್ನು ರಸ್ತೆಗಾಗಿ, ಸಾರ್ವಜನಿಕ ಉಪಯೋಗಕ್ಕಾಗಿ, ಉದ್ಯಾನವನ ಮತ್ತು ಇತರೆ ಸಾರ್ವಜನಿಕ ಉಪಯೋಗಕ್ಕಾಗಿ ಹೋಗಿರುತ್ತದೆ. ಪ್ರತಿವಾದಿಗಳು ದಿನಾಂಕ 23-06-2017 ರಂದು ಕರ್ನಾಟಕ ಸರ್ಕಾರದ ಪರವಾಗಿ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ತಂಗಲಿ ಗ್ರಾಮ ಪಂಚಾಯಿತಿರವರ ಪರವಾಗಿ ಪರಿತ್ಯಜನಾ ಪತ್ರವನ್ನು ಶೇ.45 ರ ಆಸ್ತಿಗೆ ಸಂಬಂಧಿಸಿದಂತೆ ಜಾರಿ ಮಾಡಿಕೊಟ್ಟಿರುತ್ತಾರೆ ಮತ್ತು ಸದರಿ ದಾವಾ ಸರ್ವೇ ನಂಬರ್ ಆಸ್ತಿಗಳಲ್ಲಿ 20 ಗುಂಟೆ ಜಮೀನನ್ನು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ಭೂಸ್ವಾಧೀನಪಡಿಸಿಕೊಂಡಿರುತ್ತಾರೆ.

3. ಮುಂದುವರೆದು, ಸದರಿ ಶೇ.45 ಆಸ್ತಿಯ ಮೇಲೆ ವಾದಿಗಳಿಗೆ ಯಾವುದೇ ರೀತಿಯ ಹಕ್ಕು ಮತ್ತು ಅಧಿಕಾರ ಇಲ್ಲದಿದ್ದರೂ ಕೂಡಾ ಎಲ್ಲಾ ಆಸ್ತಿಯ ಮೇಲೆ ಈ ದಾವೆಯನ್ನು ಸಲ್ಲಿಸಿರುತ್ತಾರೆ. ಸದರಿ ಶೇ.45 ರ ಆಸ್ತಿಯ ಮೇಲೆ ಸರ್ಕಾರಕ್ಕೆ ಹಕ್ಕು, ಅಧಿಕಾರ ಮತ್ತು ಮಾಲೀಕತ್ವವು ಇರುತ್ತದೆ. ಹಾಗಾಗಿ ಈ ದಾವೆಯು ಸಾರ್ವಜನಿಕ ಆವರಣ(ಅನಧಿಕೃತ ನಿವಾಸಿಗಳ ತೆರವು)ಕಾಯಿದೆ 1971 ಕಲಂ 16 ರ ಅಡಿಯಲ್ಲಿ ಊರ್ಜಿತವಾಗುವುದಿಲ್ಲ. ಈ ಅರ್ಜಿಯನ್ನು ಪುರಸ್ಕರಿಸದಿದ್ದಲ್ಲಿ ತಮಗೆ ತುಂಬಲಾರದ ಹಾನಿಯುಂಟಾಗುತ್ತದೆ. ಒಂದೊಮ್ಮೆ ಈ ಅರ್ಜಿಯನ್ನು ಪುರಸ್ಕರಿಸಿದಲ್ಲಿ ವಾದಿಗಳಿಗೆ ಯಾವುದೇ ತೊಂದರೆ ಉಂಟಾಗುವುದಿಲ್ಲ. ಆದ್ದರಿಂದ ಈ ಮೇಲ್ಕಂಡ ಅರ್ಜಿಯನ್ನು ಪುರಸ್ಕರಿಸಿ ವಾದಿಯರು ಸಲ್ಲಿಸಿರುವ ವಾದ ಪತ್ರವನ್ನು ತಿರಸ್ಕರಿಸಬೇಕೆಂದು ಪ್ರಾರ್ಥಿಸಿಕೊಂಡಿರುತ್ತಾರೆ.

4. ಮಧ್ಯಂತರ ಅರ್ಜಿ ಸಂಖ್ಯೆ:V ಕ್ಕೆ ವಾದಿಯರ ಪರ ವಕೀಲರು ತಕರಾರನ್ನು ಸಲ್ಲಿಸಿದ್ದು ಸದರಿ ತಕರಾರಿನಲ್ಲಿನ ಅಂಶಗಳು ಈ ಕೆಳಕಂಡಂತೆ ಇವೆ:-

ಪ್ರತಿವಾದಿಯರು ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ V ಊರ್ಜಿತವಾಗುವುದಿಲ್ಲ. ಪ್ರತಿವಾದಿಯರು ವಾಸ್ತವಾಂಶವನ್ನು ಮರೆಮಾಚಿ ಸುಳ್ಳು ಅಂಶಗಳನ್ನು ಒಳಗೊಂಡ ಪ್ರಮಾಣ ಪತ್ರವನ್ನು ಸಲ್ಲಿಸಿ ವಾದಿಯರಿಗೆ ತೊಂದರೆ ನೀಡಲು ಮತ್ತು ವಾದಿಯರ ಸ್ವತ್ತನ್ನು ಕಬಳಿಸಲು ಪ್ರಯತ್ನಿಸಿರುತ್ತಾರೆ. ವಾದಿಯರ ಸ್ವತ್ತಿನ ಕುರಿತಾಗಿ ಪ್ರತಿವಾದಿಯರು ಸುಳ್ಳು ಅಂಶಗಳನ್ನು ತಕರಾರಿನಲ್ಲಿ ಉಲ್ಲೇಖಿಸಿರುತ್ತಾರೆ. ಸಾರ್ವಜನಿಕ ಆವರಣ(ಅನಧಿಕೃತ ನಿವಾಸಿಗಳ ತೆರವು)ಕಾಯಿದೆ 1971 ಕಲಂ 16 ಕಾನೂನಿನ ಪರಿಕಲ್ಪನೆಯು ಈ ದಾವೆಗೆ ಅನ್ವಯಿಸುವುದಿಲ್ಲ. ಸಾರ್ವಜನಿಕ ಆವರಣ(ಅನಧಿಕೃತ ನಿವಾಸಿಗಳ ತೆರವು)ಕಾಯಿದೆ 1971 ಕಲಂ 2 ರ ಅರ್ಥವಿವರಣೆಯ ಅಡಿಯಲ್ಲಿ ಈ ದಾವೆಯ ದಾವಾ ಆಸ್ತಿಯು ಬರುವುದಿಲ್ಲ. ದಿನಾಂಕ 23-06-2017 ರ ಪರಿತ್ಯಜನಾ ಪತ್ರವನ್ನು ಮಾನ್ಯ ಕರ್ನಾಟಕ ಸರ್ಕಾರದ ಪರವಾಗಿ ಪ್ರತಿವಾದಿಯರು ಜಾರಿ ಮಾಡಿಕೊಟ್ಟಿದ್ದರೂ ಸಹ ಸರ್ಕಾರವು ಸದರಿ ಆಸ್ತಿಯನ್ನು ಸ್ವಾಧೀನತೆಯನ್ನು ಪಡೆದ ನಂತರ ಸಾರ್ವಜನಿಕ ಆವರಣ(ಅನಧಿಕೃತ ನಿವಾಸಿಗಳ ತೆರವು)ಕಾಯಿದೆ 1971 ಕಲಂ 2 ರ ಅರ್ಥವಿವರಣೆಯ ಅಡಿಯಲ್ಲಿ ಬರುತ್ತದೆ. ಸದರಿ ಆಸ್ತಿಯನ್ನು ಸರ್ಕಾರದ ಪರವಾಗಿ ಸ್ವಾಧೀನತೆಯನ್ನು ವಾದಿಯರು ಮತ್ತು ಪ್ರತಿವಾದಿಯರು ವಹಿಸಿಕೊಟ್ಟಿರುತ್ತಾರೋ ಅಥವಾ ಇಲ್ಲವೋ ಮತ್ತು ಸದರಿ ಆಸ್ತಿಯು ಸರ್ಕಾರದ ಆಸ್ತಿ ಅಥವಾ ಇಲ್ಲವೋ ಎಂಬುದು ಉಭಯ ಪಕ್ಷಗಾರರು ಸಾಕ್ಷ್ಯಗಳಿಂದ ನಿರ್ಧರಿಸಲು ಸಾಧ್ಯವಾಗುತ್ತದೆ. ಈ ಸಂಗತಿಯು ಕಾನೂನು ಮತ್ತು ವಾಸ್ತವಿಕ ಅಂಶಗಳನ್ನು ಒಳಗೊಂಡಿರುತ್ತದೆ.

5. ದಿನಾಂಕ 02-07-2014 ರ ಕರಾರು ಪತ್ರದಂತೆ ಅಭಿವೃದ್ಧಿಕಾರರಾದ ಪ್ರತಿವಾದಿಗಳು ನಿರ್ಧಿಷ್ಟಪಡಿಸಿದ ಅವಧಿಯಲ್ಲಿ ಕರಾರಿನ ಪ್ರಕಾರ ಕಾರ್ಯವನ್ನು ಪೂರ್ತಿಗೊಳಿಸಿರುವುದಿಲ್ಲ. ಹಾಗಾಗಿ ಪ್ರತಿವಾದಿಗಳು ದಿನಾಂಕ 02-07-2014 ರಂದು ಆದ ಕರಾರಿನ ಉಲ್ಲಂಘನೆಯನ್ನು ಮಾಡಿರುತ್ತಾರೆ. ದಾವಾ ಆಸ್ತಿಯನ್ನು ಸಂಪೂರ್ಣವಾಗಿ ಅಭಿವೃದ್ಧಿಗೊಳಿಸಿದ ನಂತರ ಸರ್ಕಾರವು ಸದರಿ ಆಸ್ತಿಯನ್ನು

ಸ್ವಾಧೀನತೆಗೆ ಪಡೆಯುತ್ತದೆ. ಪ್ರತಿವಾದಿಯರು ಸದರಿ ಕರಾರು ಪತ್ರದ ಪ್ರಕಾರ ನಡೆದುಕೊಳ್ಳದೇ ಇರುವುದರಿಂದ ಸದರಿ ಕರಾರು ಪತ್ರವು ಕಾನೂನು ಪ್ರಕಾರ ಜಾರಿಗೊಳಿಸತಕ್ಕಂತಹ ಕರಾರು ಪತ್ರ ಆಗಿರುವುದಿಲ್ಲ. ಹಾಗಾಗಿ ದಿನಾಂಕ 23-06-2017 ರ ಪರಿತ್ಯಜನಾ ಪತ್ರದ ಪ್ರಶ್ನೆಯೇ ಉದ್ಭವಿಸುವುದಿಲ್ಲ.

6. ಮುಂದುವರೆದು, ವಾದಿಯರು ಈ ಪ್ರಸ್ತುತ ದಾವೆಯನ್ನು ಪ್ರತಿವಾದಿಗಳ ವಿರುದ್ಧ ಸಲ್ಲಿಸಿದ್ದು, ಸದರಿ ಪ್ರತಿವಾದಿಗಳು ದಿನಾಂಕ 02-07-2014 ರ ಕರಾರು ಪತ್ರದ ಪಕ್ಷಗಾರರಾಗಿರುತ್ತಾರೆ ಮತ್ತು ಈ ದಾವೆಯನ್ನು ಸರ್ಕಾರದ ವಿರುದ್ಧವಾಗಲೀ ಅಥವಾ ಉಳಿದ ಪ್ರಾಧಿಕಾರದ ವಿರುದ್ಧ ಸಲ್ಲಿಸಿರುವುದಿಲ್ಲ. ವಾದಿಯರು ಈ ದಾವೆಯನ್ನು ಪ್ರತಿವಾದಿಗಳ ವಿರುದ್ಧ ದಾವಾ ಆಸ್ತಿಯ ತಮ್ಮ ಸ್ವಾಧೀನಾನುಭವಕ್ಕೆ ಅಡ್ಡಿ, ಆತಂಕ ಮತ್ತು ತೊಂದರೆಯನ್ನುಂಟು ಮಾಡದಂತೆ ಸಲ್ಲಿಸಿರುತ್ತಾರೆ. ಈ ದಾವೆಯಲ್ಲಿ ದಾವಾ ಆಸ್ತಿಯು ಸಾರ್ವಜನಿಕ ಆಸ್ತಿ ಆಗಿರುವುದಿಲ್ಲ ಮತ್ತು ಸಾರ್ವಜನಿಕ ಆಸ್ತಿಯಲ್ಲಿ ಯಾರೂ ಕೂಡಾ ಸ್ವಾಧೀನಾನುಭವದಲ್ಲಿ ಇರುವುದಿಲ್ಲ. ವಾದಿಯರು ದಾವಾ ಆಸ್ತಿಗೆ ಮಾಲೀಕತ್ವವನ್ನು ಹೊಂದಿ ಸ್ವಾಧೀನಾನುಭವದಲ್ಲಿ ಇರುತ್ತಾರೆ. ದಾವಾ ಆಸ್ತಿಯು ಇನ್ನೂ ಅಭಿವೃದ್ದಿಯ ಹಂತದಲ್ಲಿ ಇರುವುದರಿಂದ ದಾವಾ ಆಸ್ತಿಯನ್ನು ಸರ್ಕಾರಿ ಆಸ್ತಿ ಎಂದು ಪರಿಗಣಿಸಲು ಬರುವುದಿಲ್ಲ ಮತ್ತು ವಾದಿಗಳು ಕಾನೂನುಬಾಹಿರ ಸ್ವಾಧೀನತೆ ಹೊಂದಿರುತ್ತಾರೆಂದು ಹೇಳಲು ಬರುವುದಿಲ್ಲ. ಒಂದು ವೇಳೆ ವಾದಿಯರು ಸರ್ಕಾರದ ಆಸ್ತಿಯನ್ನು ಕಬಳಿಸಲು ಪ್ರಯತ್ನಿಸಿದರೆ ಪ್ರತಿವಾದಿಗಳಿಗೆ ವಾದಿಯರ ವಿರುದ್ಧ ಕರ್ನಾಟಕ ಲ್ಯಾಂಡ್ ಗ್ರಾಬಿಂಗ್ ಪ್ರಾಹಿಬೀಷನ್ ಆಕ್ಟ್ 2011 ರ ಅಡಿಯಲ್ಲಿ ಸಕ್ಷಮ ಪ್ರಾಧಿಕಾರದ ಮುಂದೆ ದಾವೆಯನ್ನು ಸಲ್ಲಿಸಬೇಕು. ಪ್ರತಿವಾದಿಯರು ಈ ಮಧ್ಯಂತರ ಅರ್ಜಿಗೆ ಪೂರಕವಾಗಿ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ಹಾಗಾಗಿ ಸಾರ್ವಜನಿಕ ಆವರಣ(ಅನಧಿಕೃತ ನಿವಾಸಿಗಳ ತೆರವು)ಕಾಯಿದೆ 1971 ಕಲಂ 16 ರ ಅಡಿಯಲ್ಲಿ ಬರುವುದಿಲ್ಲ. ಆದ್ದರಿಂದ ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ಪರಿಗಣಿಸಿ

ಪ್ರತಿವಾದಿಯರು ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ: V ನ್ನು ಖರ್ಚಿನೊಂದಿಗೆ ವಜಾಗೊಳಿಸಬೇಕೆಂದು ಪ್ರಾರ್ಥಿಸಿಕೊಂಡಿರುತ್ತಾರೆ.

7. ಮೇಲ್ಕಂಡ ಸಂಗತಿಗಳನ್ನು ಪರಿಶೀಲಿಸಲಾಗಿ ಈ ಕೆಳಕಂಡ ಅಂಶಗಳು ನ್ಯಾಯಾಲಯದ ಆವಗಾಹನೆಗೆ ಬರುತ್ತವೆ:-

**ಅಂ ಶ ಗ ಳು**

1. **ಪ್ರತಿವಾದಿಯರು/ಅರ್ಜಿದಾರರು ಮಧ್ಯಂತರ ಅರ್ಜಿ ಸಂಖ್ಯೆ: V ರಲ್ಲಿ ಕೋರಿರುವಂತೆ ವಾದಿಯರ ವಾದ ಪತ್ರವನ್ನು ತಿರಸ್ಕರಿಸಲು ಕೋರಿರುವಂತಹ ಪರಿಹಾರವನ್ನು ಪಡೆಯಲು ಅರ್ಹರೇ?**

2. **ಹಾಗಿದ್ದಲ್ಲಿ ಯಾವ ಆದೇಶ?**

8. ಉಭಯ ಪಕ್ಷಗಾರರ ಪರ ವಕೀಲರ ವಾದವನ್ನು ಆಲಿಸಲಾಯಿತು.

9. ಮೇಲ್ಕಾಣಿಸಿದ ಅಂಶಗಳಿಗೆ ನನ್ನ ಉತ್ತರ ಈ ಕೆಳಗಿನಂತಿರುತ್ತದೆ:-

ಅಂಶ – 1 : ನಕಾರಾತ್ಮಕವಾಗಿ

ಅಂಶ – 2 : ಅಂತಿಮ ಆದೇಶದಂತೆ.

**ಕಾ ರ ಣ ಗ ಳು**

10. **ಅಂಶ 1:-** ಪ್ರಸ್ತುತ ಈ ಮಧ್ಯಂತರ ಅರ್ಜಿ ಸಂಖ್ಯೆ:V ನ್ನು ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 7 ನಿಯಮ 11(ಡಿ) ಸಹವಾಚಕ ಕಲಂ 151 ಹಾಗೂ ಸಾರ್ವಜನಿಕ ಆವರಣ(ಅನಧಿಕೃತ ನಿವಾಸಿಗಳ ತೆರವು)ಕಾಯಿದೆ 1971 ಕಲಂ 16 ರ ಅಡಿಯಲ್ಲಿ ಸಲ್ಲಿಸಿದ್ದು, ಅರ್ಜಿಯೊಂದಿಗೆ ಲಗತ್ತಿಸಿರುವ ಪ್ರಮಾಣ ಪತ್ರದಲ್ಲಿನ ಅಂಶಗಳನ್ನು ಪರಿಗಣಿಸಿ ವಾದಿಯರು ಸಲ್ಲಿಸಿರುವ ವಾದ ಪತ್ರವನ್ನು ತಿರಸ್ಕರಿಸಿ ವಾದಿಯರು ಸಲ್ಲಿಸಿರುವ ದಾವೆಯನ್ನು ವಜಾಗೊಳಿಸಬೇಕೆಂದು ಪ್ರಾರ್ಥಿಸಿಕೊಂಡಿರುತ್ತಾರೆ.

11. ವಾದಿಯರು ಪ್ರಸ್ತುತ ಈ ದಾವೆಯನ್ನು ಪ್ರತಿವಾದಿಯರ ವಿರುದ್ದ ದಾವಾ ಅನುಸೂಚಿತ ಸ್ವತ್ತಿನ ಸ್ವಾಧೀನಾನುಭವಕ್ಕೆ ಪ್ರತಿವಾದಿಯರಾಗಲಿ, ಅವರ ಕುಟುಂಬದವರಾಗಲಿ, ಅವರ ಸೇವಕರಾಗಲಿ ಅಥವಾ ಅವರ ಪ್ರತಿನಿಧಿಗಳಾಗಲಿ ಯಾವುದೇ ರೀತಿಯ ತಕರಾರು ಮಾಡದಂತೆ ಶಾಶ್ವತ ನಿರ್ಬಂಧಕಾಜ್ಞೆಯ ಪರಿಹಾರವನ್ನು ಕೋರಿ ಸಲ್ಲಿಸಿರುತ್ತಾರೆ.

12. ಪ್ರತಿವಾದಿಯರು ಮಧ್ಯಂತರ ಅರ್ಜಿ ಸಂಖ್ಯೆ: V ರಂತೆ ವಾದಿಯರು ಸಲ್ಲಿಸಿರುವ ದಾವೆಯು ಕಾನೂನಿನ ಅಡಿಯಲ್ಲಿ ಊರ್ಜಿತವಾಗದೇ ಇರುವುದರಿಂದ ವಾದಿಯರು ಸಲ್ಲಿಸಿರುವ ವಾದ ಪತ್ರವನ್ನು ತಿರಸ್ಕೃತಗೊಳಿಸಬೇಕೆಂದು ಪ್ರಾರ್ಥಿಸಿ ಕೊಂಡಿರುತ್ತಾರೆ. ಇದಕ್ಕೆ ಪ್ರತಿಯಾಗಿ ವಾದಿಯರ ಪರ ವಕೀಲರು ವಾದ ಪತ್ರದಲ್ಲಿ ನಮೂದಿಸಿರುವಂತೆ ದಾವಾ ಆಸ್ತಿಯು ಸರ್ಕಾರಿ ಆಸ್ತಿ/ಸಾರ್ವಜನಿಕ ಆಸ್ತಿಯಾಗಿರು ವುದಿಲ್ಲ ಮತ್ತು ವಾದಿಯರು ಸಾರ್ವಜನಿಕ ಆಸ್ತಿಯಲ್ಲಿ ಕಾನೂನು ಬಾಹೀರ ಸ್ವಾಧೀನತೆಯನ್ನು ಹೊಂದಿರುವುದಿಲ್ಲ. ಅಂತೆಯೇ ವಾದಿಯರು ಸಲ್ಲಿಸಿರುವ ದಾವೆಯು ಯಾವುದೇ ಕಾನೂನಿನಿಂದ ಪ್ರತಿಬಂಧಿತವಾಗಿರುವುದಿಲ್ಲ. ಹಾಗಾಗಿ ಪ್ರತಿವಾದಿಯರು ಸಲ್ಲಿಸಿರುವ ಅರ್ಜಿಯನ್ನು ತಿರಸ್ಕೃತಗೊಳಿಸಬೇಕೆಂದು ಪ್ರಾರ್ಥಿಸಿಕೊಂಡಿರುತ್ತಾರೆ.

13. ಮೇಲ್ಕಂಡ ಉಭಯ ಪಕ್ಷಗಾರರ ಹೇಳಿಕೆ ಮತ್ತು ದಾಖಲಾತಿಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಯಿತು. ಪ್ರತಿವಾದಿಯರು ಕ್ರಮಾದೇಶ 7 ನಿಯಮ 11(ಡಿ)ರ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಸದರಿ ಕ್ರಮಾದೇಶ 7 ನಿಯಮ 11 ರ ಕಾನೂನಿನ ಪರಿಕಲ್ಪನೆ ಈ ಕೆಳಕಂಡಂತೆ ಇರುತ್ತದೆ. ವಾದಪತ್ರವನ್ನು ತಿರಸ್ಕರಿಸುವುದು:-

ಕೆಳಕಂಡ ಸಂಧರ್ಭಗಳಲ್ಲಿ ವಾದಪತ್ರವನ್ನು ತಿರಸ್ಕರಿಸತಕ್ಕದ್ದು.

**(ಎ)** ಅದರಲ್ಲಿ ವ್ಯಾಜ್ಯ ಕಾರಣವನ್ನು ತಿಳಿಸದಿರುವಲ್ಲಿ.

**(ಬಿ)** ಕೇಳಲಾದ ಪರಿಹಾರದ ಮೌಲ್ಯವನ್ನು ಕಡಿಮೆಯಾಗಿ ನಮೂದಿಸಿರುವಲ್ಲಿ ಮತ್ತು ತಾನು ಗೊತ್ತುಪಡಿಸಿದ ಕಾಲದೊಳಗೆ ಆ ಮೌಲ್ಯ ನಿಗದಿಯನ್ನು ಸರಿಪಡಿಸಬೇಕೆಂದು ನ್ಯಾಯಾಲಯವು ವಾದಿಯನ್ನು ಅಗತ್ಯಪಡಿಸಿದ್ದು, ಅವನು ಹಾಗೆ ಮಾಡಲು ತಪ್ಪಿದಲ್ಲಿ.

**(ಸಿ)** ಕೇಳಲಾದ ಪರಿಹಾರದ ಮೌಲ್ಯವನ್ನು ಸರಿಯಾಗಿ ನಮೂದಿಸಿದ್ದರೂ ಸಾಕಷ್ಟು ಸ್ಟಾಂಪುಗಳಿಲ್ಲದ ಕಾಗದದ ಮೇಲೆ ವಾದ ಪತ್ರವನ್ನು ಬರೆದಿರುವಲ್ಲಿ ಮತ್ತು ನ್ಯಾಯಾಲಯವು ತಾನು ಗೊತ್ತುಪಡಿಸುವ ಕಾಲದೊಳಗೆ ಅಗತ್ಯವಾದ ಸ್ಟಾಂಪು ಕಾಗದವನ್ನು ವಾದಿಯು ಒದಗಿಸಬೇಕೆಂದು ಅವನನ್ನು ಅಗತ್ಯಪಡಿಸಿದ್ದು, ಅವನು ಹಾಗೆ ಮಾಡಲು ತಪ್ಪಿದಲ್ಲಿ.

**(ಡಿ)** ವಾದ ಪತ್ರದಲ್ಲಿನ ಹೇಳಿಕೆಯಿಂದ ದಾವೆಯು ಯಾವುದೇ ಕಾನೂನಿನ ಮೂಲಕ ಪ್ರತಿಬಂಧಿತವಾಗಿದೆಯೆಂದು ಕಂಡುಬಂದಲ್ಲಿ.

**(ಇ)** ಅದನ್ನು ದ್ವಿಪ್ರತಿಯಲ್ಲಿ ಹಾಜರುಪಡಿಸದಿರುವಾಗ 9 ನೇ ಉಪಬಂಧಗಳನ್ನು ಪಾಲಿಸಲು ವಾದಿಯು ವಿಫಲನಾಗಿರುವಾಗ.

ಎಫ್**(9)** ನೇ ನಿಯಮದ ಉಪಬಂಧಗಳನ್ನು ಪಾಲಿಸಲು ವಾದಿಯು ವಿಫಲನಾದಾಗ, ಮೌಲ್ಯ ನಿಗದಿಯನ್ನು ಸರಿಪಡಿಸಲಾಗದಂತೆ ಅಥವಾ ಅಗತ್ಯವಿರುವಷ್ಟು ಸ್ಟಾಂಪು ಕಾಗದಗಳನ್ನು ಒದಿಗಿಸಲಾಗದಂತೆ ವಾದಿಯು ಅಸಾಧಾರಣ ಸ್ವರೂಪದ ಯಾವುದೇ ಕಾರಣದಿಂದಾಗಿ ಪ್ರತಿಬಂಧಿತನಾಗಿದ್ದನೆಂದು ಮತ್ತು ಈ ಕಾಲವನ್ನು ವಿಸ್ತರಿಸಲು ನಿರಾಕರಣೆ ಮಾಡುವುದರಿಂದಾಗಿ ವಾದಿಗೆ ಗುರುತರ ಅನ್ಯಾಯ ವುಂಟಾಗುವುದೆಂದು, ನ್ಯಾಯಾಲಯಕ್ಕೆ ಮನದಟ್ಟಾದ ಹೊರತು, ತಾನು ಅಭಿಲೇಖಿಸಬೇಕಾದ ಕಾರಣಗಳಿಗಾಗಿ, ಮೌಲ್ಯ ನಿಗದಿಯನ್ನು ಸರಿಪಡಿಸಲು ಅಥವಾ ಅಗತ್ಯವಿರುವಷ್ಟು ಸ್ಟ್ಯಾಂಪು ಕಾಗದಗಳನ್ನು ಒದಗಿಸಲು ಗೊತ್ತುಪಡಿಸಿದ ಅವಧಿಯನ್ನು ಅದು ವಿಸ್ತರಿಸತಕ್ಕುದಲ್ಲ.

14. ಮೇಲ್ಕಂಡ ಉಭಯ ಪಕ್ಷಗಾರರ ವಾದವನ್ನು ಉಭಯ ಪಕ್ಷಗಾರರ ದಾಖಲಾತಿ ಮತ್ತು ಹೇಳಿಕೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಯಿತು. ಪ್ರತಿವಾದಿಯರು ದಿವಾನಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 7 ನಿಯಮ 11(ಡಿ)ರ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಿ ವಾದಿಯರು ಸಲ್ಲಿಸಿರುವ ವಾದ ಪತ್ರವನ್ನು ತಿರಸ್ಕೃತಗೊಳಿಸುವಂತೆ ಕೋರಿರುತ್ತಾರೆ. ಈ ಕುರಿತು ದಿವಾನಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 7 ನಿಯಮ 11(ಡಿ)ನ್ನು ಪರಿಶೀಲಿಸಲಾಗಿ ಸದರಿ ನಿಯಮದಂತೆ ಮೇಲ್ಕಂಡಂತೆ ನಮೂದಿಸಿರುವ 6 ಕಾರಣಗಳ ಕುರಿತಾಗಿ ವಾದ ಪತ್ರವನ್ನು ತಿರಸ್ಕೃತಗೊಳಿಸಲು ಅವಕಾಶ ಇರುತ್ತದೆ. ಪ್ರತಿವಾದಿಯರು ಮಧ್ಯಂತರ ಅರ್ಜಿಯಲ್ಲಿ ವಾದಿಯರು ಸಲ್ಲಿಸಿರುವ ದಾವೆಯು ಊರ್ಜಿತವಾಗುವುದಿಲ್ಲ ಎಂದು ಉಲ್ಲೇಖಿಸಿರುತ್ತಾರೆ. ಆ ಕಾರಣದಿಂದ ವಾದಿಯರು ಸಲ್ಲಿಸಿರುವ ವಾದ ಪತ್ರವನ್ನು ತಿರಸ್ಕೃತಗೊಳಿಸಬೇಕೆಂದು ಪ್ರಾರ್ಥಿಸಿಕೊಂಡಿರುತ್ತಾರೆ.

15. ಈ ಕುರಿತಾಗಿ ಕ್ರಮಾದೇಶ 7 ನಿಯಮ 11(ಡಿ) ಪರಿಶೀಲಿಸಿದಾಗ ವಾದಪತ್ರದಲ್ಲಿನ ಹೇಳಿಕೆಯಿಂದ ದಾವೆಯು ಯಾವುದೇ ಕಾನೂನಿನ ಮೂಲಕ ಪ್ರತಿಬಂಧಿತವಾಗಿದೆಯೆಂದು ಕಂಡುಬಂದಲ್ಲಿ ವಾದ ಪತ್ರವನ್ನು ತಿರಸ್ಕರಿಸಬಹುದು ಎಂದು ಉಲ್ಲೇಖಿಸಿರುತ್ತದೆ. ಈ ಕುರಿತು ಪರಿಶೀಲಿಸಲಾಗಿ ಪ್ರಸ್ತುತ ಈ ದಾವೆಯಲ್ಲಿ ಪ್ರತಿವಾದಿಯರು, ವಾದಿಯರ ದಾವಾ ಅನುಸೂಚಿತ ಸ್ವತ್ತಿನ ವಾದಿಯರ ಸ್ವಾಧೀನಾನುಭವಕ್ಕೆ ಪ್ರತಿವಾದಿಯರು ಅಡ್ಡಿ, ಆತಂಕ ಮತ್ತು ತೊಂದರೆಯನ್ನುಂಟು ಮಾಡಲು ಪ್ರಯತ್ನಿಸಿರುವುದರಿಂದ ವ್ಯಾಜ್ಯ ಕಾರಣವು ಉಂಟಾಗಿರುತ್ತದೆ ಎಂದು ಹೇಳಿರುತ್ತಾರೆ. ಅಂತೆಯೇ ತಮ್ಮ ವಾದಪತ್ರದ ಪರಿಹಾರದಲ್ಲಿ ಪ್ರತಿವಾದಿಯರು, ಅವರ ಕುಟುಂಬದವರು, ಅವರ ಪ್ರತಿನಿಧಿ ಹಾಗೂ ಸೇವಕರು ದಾವಾ ಅನುಸೂಚಿತ ಸ್ವತ್ತಿನ ಸ್ವಾಧೀನಾನುಭವಕ್ಕೆ ಅಡ್ಡಿ, ಆತಂಕ ತೊಂದರೆ ನೀಡದಂತೆ ಶಾಶ್ವತ ನಿರ್ಬಂಧಕಾಜ್ಞೆಯ ಪರಿಹಾರವನ್ನು ಕೋರಿರುವುದು ಕಂಡುಬರುತ್ತದೆ.

16. ಯಾವುದೇ ಒಂದು ವಾದ ಪತ್ರವನ್ನು ತಿರಸ್ಕೃತಗೊಳಿಸುವ ಕಾಲಕ್ಕೆ ವಾದಿಯರು ಸಲ್ಲಿಸಿರುವಂತಹ ವಾದ ಪತ್ರವನ್ನು ಪರಿಗಣಿಸಬೇಕಾಗುತ್ತದೆ. ಅದನ್ನು ಹೊರತುಪಡಿಸಿ ಪ್ರತಿವಾದ ಪತ್ರಗಳಲ್ಲಿನ ಅಂಶಗಳ ಆಧಾರದಲ್ಲಿ ವಾದ ಪತ್ರವನ್ನು ತಿರಸ್ಕೃತಗೊಳಿಸಲು ಬರುವುದಿಲ್ಲ ಎಂದು ನ್ಯಾಯಾಲಯ ತೀರ್ಮಾನಿಸುತ್ತದೆ. ಈ ಕುರಿತು ಪರಿಶೀಲಿಸಲಾಗಿ ವಾದಿಯರು ಈ ದಾವೆಯಲ್ಲಿ ಪ್ರತಿವಾದಿಯರು ದಿನಾಂಕ 02-07-2014 ರಂದು ವಾದಿಯರು ಮತ್ತು ಪ್ರತಿವಾದಿಯರ ನಡುವೆ ದಾವಾ ಆಸ್ತಿಯ ಕುರಿತು ಆದ ಅಭಿವೃದ್ದಿ ಕರಾರು ಪತ್ರದ ಪ್ರಕಾರ ಪ್ರತಿವಾದಿಯರು ದಾವಾ ಆಸ್ತಿಯನ್ನು ಅಭಿವೃದ್ಧಿಪಡಿಸಿರುವುದಿಲ್ಲ ಮತ್ತು ಸದರಿ ಅಭಿವೃದ್ಧಿ ಕಾರ್ಯವನ್ನು ಮುಂದೂಡುತ್ತಾ ಬಂದಿರುತ್ತಾರೆ. ಹಾಗಾಗಿ ಪ್ರತಿವಾದಿಯರು ದಿನಾಂಕ 02-07-2014 ರ ಕರಾರು ಪತ್ರದ ಷರತ್ತುಗಳನ್ನು ಉಲ್ಲಂಘನೆ ಮಾಡಿರುತ್ತಾರೆ. ಹಾಗಾಗಿ ಪ್ರತಿವಾದಿಯರು 02-07-2014 ರ ಕರಾರು ಪತ್ರದ ಪ್ರಕಾರ ನಿರ್ಧಿಷ್ಟಪಡಿಸಿದ ಕಾಲಾವಧಿಯಲ್ಲಿ ದಾವಾ ಆಸ್ತಿಯನ್ನು ಅಭಿವೃದ್ಧಿಪಡಿಸದೇ ಇರುವುದರಿಂದ ಮತ್ತು ಪ್ರತಿವಾದಿಗಳು ಸದರಿ ಅಭಿವೃದ್ಧಿ ಕರಾರನ್ನು ಉಲ್ಲಂಘನೆ ಮಾಡಿರುವುದರಿಂದ ವಾದಿಯರು ದಾವಾ ಆಸ್ತಿಗೆ ಮಾಲೀಕತ್ವವನ್ನು ಹೊಂದಿ ಸ್ವಾಧೀನಾನುಭವದಲ್ಲಿ ಇರುತ್ತಾರೆ. ಸದರಿ ವಾದಿಯರ ದಾವಾ ಆಸ್ತಿಯ ಸ್ವಾಧೀನಾನುಭವಕ್ಕೆ ಪ್ರತಿವಾದಿಯರು ಅಡ್ಡಿ, ಆತಂಕ ಮತ್ತು ತೊಂದರೆಯನ್ನು ಉಂಟು ಮಾಡಿರುವ ಕಾರಣಕ್ಕೆ ವ್ಯಾಜ್ಯ ಕಾರಣವು ಉಂಟಾಗಿರುತ್ತದೆ ಎಂದು ಹೇಳಿರುತ್ತಾರೆ. ಈ ಮೇಲ್ಕಂಡ ಅಂಶವನ್ನು ಪರಿಶೀಲಿಸಿದಾಗ ವಾದಪತ್ರದಲ್ಲಿ ಸರಿಯಾದ ವ್ಯಾಜ್ಯ ಕಾರಣವನ್ನು ನಮೂದಿಸಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಸದರಿ ದಾವೆಯು ಕೇವಲ ಶಾಶ್ವತ ನಿರ್ಬಂಧಕಾಜ್ಞೆಯ ದಾವೆಯಾಗಿರುವುದರಿಂದ ಈ ದಾವೆಯನ್ನು ಸಲ್ಲಿಸುವ ಸಮಯದಲ್ಲಿ ದಾವಾ ಆಸ್ತಿಯಲ್ಲಿ ವಾದಿಯರು ಸ್ವಾಧೀನಾನುಭವದಲ್ಲಿ ಇರುತ್ತಾರೋ ಅಥವಾ ಇಲ್ಲವೋ ಎಂಬುದನ್ನು ಮಾತ್ರ ಪರಿಶೀಲಿಸಬೇಕಾಗುತ್ತದೆ. ವಾದ ಪತ್ರವನ್ನು ಪರಿಶೀಲಿಸಿದಾಗ ವಾದಿಯರ ದಾವೆಯು ಯಾವುದೇ ಕಾನೂನಿನ ಅಡಿಯಲ್ಲಿ ಪ್ರತಿಷೇಧಿತವಾಗಿರುವುದು ಕಂಡು ಬರುವುದಿಲ್ಲ. ಆದ್ದರಿಂದ ಪ್ರತಿವಾದಿಯರ ಪರ ವಕೀಲರ ವಾದದಂತೆ ಈ ದಾವೆಯು ಕಾನೂನಿನ

ಅಡಿಯಲ್ಲಿ ಊರ್ಜಿತವಾಗುವುದಿಲ್ಲ ಎಂಬ ಅಂಶವನ್ನು ಪರಿಗಣಿಸಲು ಬರುವುದಿಲ್ಲ ವೆಂದು ನ್ಯಾಯಾಲಯ ತೀರ್ಮಾನಕ್ಕೆ ಬರುತ್ತದೆ.

17. ಪ್ರತಿವಾದಿಯರ ಪರ ವಕೀಲರು ತಮ್ಮ ವಾದ ಮಂಡನೆಯಲ್ಲಿ ವಾದಿಯರು ಸಲ್ಲಿಸಿರುವಂತಹ ದಾವೆಯು ಕಾನೂನಿನ ಅಡಿಯಲ್ಲಿ ಪ್ರತಿಬಂಧಿತವಾಗಿರುವುದರಿಂದ ವಾದಿಯರು ಸಲ್ಲಿಸಿರುವ ವಾದ ಪತ್ರವನ್ನು ತಿರಸ್ಕೃತಗೊಳಿಸಬೇಕೆಂದು ಹೇಳಿರುತ್ತಾರೆ. ಈ ಕುರಿತು ಪರಿಶೀಲಿಸಲಾಗಿ ವಾದಿಯರು ಸಲ್ಲಿಸಿರುವಂತಹ ದಾವೆಯು ಸಾರ್ವಜನಿಕ ಆವರಣ(ಅನಧಿಕೃತ ನಿವಾಸಿಗಳ ತೆರವು)ಕಾಯಿದೆ 1971 ಕಲಂ 16ರ ಕಾನೂನಿನ ಅಡಿಯಲ್ಲಿ ಪ್ರತಿಬಂಧಿತವಾಗಿದೆ ಎಂದು ಪ್ರತಿವಾದಿಯರು ತಮ್ಮ ಅರ್ಜಿಯಲ್ಲಿ ಉಲ್ಲೇಖಿಸಿರುತ್ತಾರೆ .

18. ವಾದಿಗಳು ಮತ್ತು ಪ್ರತಿವಾದಿಗಳು ಹಾಜರುಪಡಿಸಿರುವ ದಾಖಲಾತಿಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಯಿತು. ದಾವಾಸ್ತಿಯ ಪೈಕಿ ಪ್ರತಿಶತ ಶೇ.45ರಷ್ಟು ಆಸ್ತಿಯು ಸಾರ್ವಜನಿಕ/ಸರ್ಕಾರಿ ಆಸ್ತಿ ಎಂಬುದರ ಕುರಿತು ವಾದಿಗಳು ವಿವಾಧ ಮಾಡಿರುತ್ತಾರೆ. ಪ್ರತಿವಾದಿಗಳು ಹಾಜರುಪಡಿಸಿರುವ ಪರಿತ್ಯಜನಾ ಪತ್ರವನ್ನು ಪರಿಶೀಲಿಸಿದಾಗ ದಿನಾಂಕ 23-06-2017ರಂದು ಪ್ರತಿವಾದಿಗಳು ಸರ್ಕಾರದ ಪರವಾಗಿ ಜಾರಿಮಾಡಿಕೊಟ್ಟಿರುವ ಪರಿತ್ಯಜನಾ ಪತ್ರದಲ್ಲಿ ರಸ್ತೆ ಮಾರ್ಜೀನಿಗಾಗಿ 13094.53 ಚ.ಮೀ, ಉದ್ಯಾನವನ 2247.56 ಚ.ಮೀ, ಸಾರ್ವಜನಿಕ – ಅರೆ ಸಾರ್ವಜನಿಕ ಉಪಯೋಗಕ್ಕಾಗಿ 1215.43 ಚ.ಮೀ. ಮತ್ತು ಸಾರ್ವಜನಿಕ ಉಪಯುಕ್ತತೆಗೆ 837.46 ಚ.ಮೀ. ಅಳತೆಯ ಸ್ವತ್ತನ್ನು ಸರ್ಕಾರಿ ಆದೇಶದಂತೆ ಗ್ರಾಮ ಪಂಚಾಯಿತಿಗೆ ವಹಿಸಿಕೊಟ್ಟಿರುತ್ತೇವೆ ಎಂದು ನಮೂದಿಸಿರುತ್ತಾರೆ. ವಾದಿಗಳು ಸದರಿ ಪರಿತ್ಯಜನಾ ಪತ್ರವನ್ನು ಪ್ರತಿವಾದಿಗಳಿಗೆ ಸರ್ಕಾರದ ಪರವಾಗಿ ಜಾರಿಮಾಡಿಕೊಡಲು ಯಾವುದೇ ಹಕ್ಕು, ಅಧಿಕಾರ ಮತ್ತು ಹಿತಾಸಕ್ತಿ ಇರುವುದಿಲ್ಲ ಎಂದು ಹೇಳಿರುತ್ತಾರೆ. ಹಾಗಾಗಿ ಸದರಿ ಪರಿತ್ಯಜನಾ ಪತ್ರದ ಕುರಿತು ಉಭಯ ಪಕ್ಷಗಾರರ ಸಾಕ್ಷ್ಯದ ಆಧಾರದ ಮೇಲೆ ನಿರ್ಧರಿಸುವುದು ಅತ್ಯವಶ್ಯಕವಾಗಿರುತ್ತದೆ. ಹಾಗಾಗಿ ದಾವಾ ಆಸ್ತಿಯ ಪೈಕಿ ಪ್ರತಿಶತ 45

ರಷ್ಟು ಆಸ್ತಿಯು ಸಾರ್ವಜನಿಕ ಆಸ್ತಿ ಎಂಬುದರ ಕುರಿತು ವಿವಾಧ ಇರುತ್ತದೆ. ಈ ಕುರಿತು ಸಾರ್ವಜನಿಕ ಆವರಣ(ಅನಧಿಕೃತ ನಿವಾಸಿಗಳ ತೆರವು)ಕಾಯಿದೆ 1971 ಕಲಂ 2(ಇ)ಯನ್ನು ಪಶೀಲಿಸುವುದು ಅವಶ್ಯಕವಾಗಿರುತ್ತದೆ. ಕಲಂ (2) ಈ ಕೆಳಗಿನಂತಿರುತ್ತದೆ.

**e) "Public premises" means any premises belonging to or allotted to State Government or taken on lease or requisitioned by or on behalf of the State Government and includes any premises belonging to or taken on lease by or on behalf of,-**

**(i) a local authority;**

**(ii) any company as defined in section 3 of the Companies Act, 1955 (Central Act 1 of 1956) in which not less than fifty one percent of the paid up share capital is held by the State Government; [or any company which is a subsidiary (within the meaning of the said Act) of the first mentioned company"]**

**1. Inserted by Act 14 of 2000 w.e.f. 27.4.2000**

**(iii) any corporation (not being a company as defined in section 3 of the Companies, Act, 1956) established by or under**

**[a Central Act or] a State Act and owned or controlled by the State Government; and**

**1. Inserted by Act 1 of 1977 w.e.f. 21.2.1977**

**[(iii-a) the Institute for social and economic change, Bangalore.]**

**1. Inserted by Act 20 of 2004 w.e.f. 19.3.2004.**

**[(iv) a Notified Institution or Declared Institution under the Karnataka Hindu Religious Institutions and Charitable Endowments Act 1997.]**

**1. Substituted by Act 33 of 2001 w.e.f. 1.5.2003 by Notification. Text of the Notification is at the end of the Act.**

**1 [ (v) a wakf registered with the Karnataka State Board of Wakfs;]**

**2 (vi) the State Government and the Government of Andhra Pradesh jointly, and under the management or administrative control of the Tungabhadra Board constituted by the Government of India under sub-Section (4) of section 66 of the Andhra State Act, 1953 (Central Act 30 of 1953).]**

**1. Inserted by Act 28 of 1981 w.e.f. 30.9.1980**

**2. Substituted by Act 22 of 1999 w.e.f. 4.8.1999**

**[(vii)a University established or deemed to have been established by or under any law of the State Legislature]**

**1. Inserted by Act 4 of 1993 w.e.f. 8.10.1991 and again Substituted by Act 18 of 2005 w.e.f. 27.5.2005.1974: KAR. ACT 32] Public premises (Eviction of unauthorised Occupants.**

**[(viii) A Co-operative Society or a Federation of Co-operative Societies established under any law in**

**force in the State in which the Government Property or share is involved.]**

**1. Inserted by Act 15 of 2006 w.e.f. 02.8.2006**

**Explanation**

**For the purposes of this clause 'local authority'**

**means,-**

**(a) a municipal corporation;**

**(b) a town or city municipal council;**

**[(bb) a market committee established under the Karnataka Agricultural Produce Marketing (Regulation) Act, 1966 (Karnataka Act 27 of 1966);]**

**1. Inserted by Act 16 of 1991 w.e.f. 1.8.1991**

**[(c)an Improvement Board established under the Karnataka Improvement Boards Act, 1976 (Karnataka Act 11 of 1976);**

**1. Substituted by Act 4 of 1993 w.e.f. 8.10.1992**

**[(d) a Zilla Panchayat or Taluk Panchayat or a Grama Panchayat established under the Karnataka Panchayat Raj Act, 1993 (Karnataka Act 14 of 1993).]**

**1. Substituted by Act 15 of 1995 w.e.f. 15.5.1995**

**(e) the Bangalore Development Authority constituted under the Bangalore Development Authority Act, 1976 (Karnataka Act 12 of 1976);**

**(f) an Urban Development Authority constituted under the Karnataka Urban Development 15 Authorities Act, 1987 (Karnataka Act 34 of 1987).]**

**1. Clause (c) to (f) Inserted by Act 4 of 1993 w.e.f. 8.10.1992**

**[(g) the Karnataka Slum Clearance Board established under the Karnataka Slum Areas (Improvement and Clearance) Act, 1973]**

ಮೇಲಿನ ಕಾನೂನಿನ ಪರಿಕ್ಪನೆಗಳನ್ನು ಪರಿಶೀಲಿಸಿದಾಗ ದಾವಾಸ್ತಿಯು " ಸಾರ್ವಜನಿಕ ಆವರಣ " ಆಗಿರುತ್ತದೆ ಎಂಬುದರ ಕುರಿತು ವಿವಾಧ ಇರುವುದು ಸ್ಪಷ್ಟವಾಗಿ ಕಂಡು ಬರುತ್ತದೆ. ಉಭಯ ಪಕ್ಷಗಾರರ ಸಾಕ್ಷಿದಾರರ ಸಾಕ್ಷ್ಯ ಇಲ್ಲದೇ ದಾವಾ ಆಸ್ತಿಯು ಸಾರ್ವಜನಿಕ ಆವರಣ ಆಗಿರುತ್ತದೆಯೋ ಅಥವಾ ಇಲ್ಲವೋ ಎಂಬುದನ್ನು ಪರಿಗಣಿಸಲು ಬರುವುದಿಲ್ಲ. ಈ ಕುರಿತು ಸಾರ್ವಜನಿಕ ಆವರಣ(ಅನಧಿಕೃತ ನಿವಾಸಿಗಳ ತೆರವು)ಕಾಯಿದೆ 1971 ಕಾಯ್ದೆ ಕಲಂ 16ರ ಕಾನೂನಿನ ಪರಿಕಲ್ಪನೆಯನ್ನು ಪರಿಶೀಲಿಸುವುದು ಅತ್ಯವಶ್ಯಕವಾಗಿರುತ್ತದೆ. ಸದರಿ ಕಾನೂನಿನ ಪರಿಕಲ್ಪನೆಯು ಈ ಕೆಳಗಿನಂತೆ ಇರುತ್ತದೆ.

**Section 16 : Bar of Jurisdiction :- No court shall have jurisdiction to entertain any suit or proceedings in respect of the eviction of any person who is in unauthorized occupation of any public premise or the recovery of arrears of rent payable under sub-section 1 of section 7 or the damages payable under sub-section 2 of that section or the costs awarded to the State/Government or the Local Authority or the Corporate Authority under sub-section 5 of section 10 or any portion of such rent, damages or costs.**

ಈ ಮೇಲಿನ ಕಾನೂನಿನ ಪರಿಕಲ್ಪನೆಯನ್ನು ಪರಿಶೀಲಿಸಲಾಗಿ ಯಾವುದೇ ಒಬ್ಬ ವ್ಯಕ್ತಿಯು ಯಾವುದೇ ಒಂದು ಸಾರ್ವಜನಿಕ ಆವರಣದಲ್ಲಿ ಅನಧೀಕೃತವಾಗಿ ಸ್ವಾಧೀನ ಹೊಂದಿದ್ದಲ್ಲಿ ಅಂತಹ ಸ್ವತ್ತನ್ನು ತೆರವುಗೊಳಿಸುವ ಮತ್ತು ಬಾಕಿ ಬಾಡಿಗೆ ವಸೂಲಿ ಇತ್ಯಾದಿ ವಿಚಾರಗಳನ್ನು ಕುರಿತು ಯಾವುದೇ ದಾವೆಯನ್ನು ಅಧಿವಿಚಾರಣೆ ಮಾಡಲು ನ್ಯಾಯಾಲಯಕ್ಕೆ ಅಧಿಕಾರ ವ್ಯಾಪ್ತಿ ಇರುವುದಿಲ್ಲ ಎಂದು ಉಲ್ಲೇಖಿಸಿರುವುದು ಕಂಡು ಬರುತ್ತದೆ. ಆದರೆ ಈ ದಾವೆಯಲ್ಲಿ ದಾವಾ ಆಸ್ತಿಯು ಸಾರ್ವಜನಿಕ ಆವರಣ ಆಗಿರುತ್ತದೆ ಎಂಬುದರ ಕುರಿತು ವಿವಾಧ ಇರುವುದು ಸ್ಪಷ್ಟವಾಗಿ ಕಂಡು ಬರುತ್ತದೆ. ಉಭಯ ಪಕ್ಷಗಾರರ ಸಾಕ್ಷಿದಾರರ ಸಾಕ್ಷ್ಯ ಇಲ್ಲದೇ ದಾವಾ ಆಸ್ತಿಯು ಸಾರ್ವಜನಿಕ ಆವರಣ ಆಗಿರುತ್ತದೆಯೋ ಅಥವಾ ಇಲ್ಲವೋ ಎಂಬುದನ್ನು ಪರಿಗಣಿಸಲು ಬರುವುದಿಲ್ಲ. ಹಾಗಾಗಿ ಸಾರ್ವಜನಿಕ ಆವರಣ(ಅನಧಿಕೃತ ನಿವಾಸಿಗಳ ತೆರವು)ಕಾಯಿದೆ 1971) ಕಾಯ್ದೆ ಕಲಂ 16 ರ ಕಾನೂನಿನ ಪರಿಕಲ್ಪನೆಯ ಅಡಿಯಲ್ಲಿ ಈ ದಾವೆಯು ಬರುವುದಿಲ್ಲ ಎಂಬುದು ನ್ಯಾಯಾಲಯದ ಅಭಿಪ್ರಾಯವಾಗಿದೆ .

19. ದಾವಾ ಸ್ವತ್ತಿನಲ್ಲಿ ಪೈಕಿ ಶೇ.45 ರಷ್ಟು ಆಸ್ತಿಯು ಸಾರ್ವಜನಿಕ/ಸರ್ಕಾರಿ ಆಸ್ತಿಯಾಗಿರುತ್ತದೆ ಎಂದು ಹೇಳಿರುವುದು ಕಂಡು ಬರುತ್ತದೆ. ಆದರೆ ವಾದಿಗಳು ದಾವಾ ಆಸ್ತಿಯ ಪೈಕಿ ಪ್ರತಿಶತ 45 ರಷ್ಟು ಆಸ್ತಿಯನ್ನು ಸರ್ಕಾರವು ಸ್ವಾಧೀನತೆಯನ್ನು ಪಡೆದಿರುವುದಿಲ್ಲ ಮತ್ತು ಸದರಿ ಅಸ್ತಿಗೆ ಸಂಬಂಧಿಸಿದಂತೆ ಪರಿತ್ಯಜನಾ ಪತ್ರವನ್ನು ಸರ್ಕಾರದ ಪರವಾಗಿ ಜಾರಿಮಾಡಿಕೊಡಲು ಪ್ರತಿವಾದಿಗಳಿಗೆ ಯಾವುದೇ ರೀತಿಯ ಹಕ್ಕು, ಅಧಿಕಾರ ಮತ್ತು ಹಿತಾಸಕ್ತಿ ಇರುವುದಿಲ್ಲ. ಹಾಗಾಗಿ ಸದರಿ ಪ್ರತಿಶತ 45 ರಷ್ಟು ಆಸ್ತಿಯು ಸಾರ್ವಜನಿಕ ಆಸ್ತಿ/ಸರ್ಕಾರಿ ಆಸ್ತಿಯಾಗಿರುತ್ತದೆ ಇಲ್ಲವೋ ಎಂಬುದನ್ನು ಉಭಯ ಪಕ್ಷಗಾರರ ಸಾಕ್ಷ್ಯ ಮುಕ್ತಾಯವಾದ ನಂತರ ಪರಿಶೀಲಿಸಬೇಕಾಗುತ್ತದೆ.

20. ಪ್ರತಿವಾದಿಯರ ಪರ ವಕೀಲರು ಮಧ್ಯಂತರ ಅರ್ಜಿಗೆ ಪೂರಕವಾಗಿ ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿ ಈ ಕೆಳಗಿನ ತೀರ್ಪುಜನ್ಯಗಳನ್ನು ಉಲ್ಲೇಖಿಸಿರುತ್ತಾರೆ. ಸದರಿ ತೀರ್ಪುಜನ್ಯಗಳನ್ನು ಪರಿಶೀಲಿಸುವುದು ಅತ್ಯವಶ್ಯಕವಾಗಿರುತ್ತದೆ.

**1) 1998(5) ಕೆ ಎಲ್ ಜೆ 221 ಎನ್.ಮಹಮ್ಮದ್ ವಿರುದ್ಧ ದಿ ಮಂಡಲ್ ಪಂಚಾಯತ್ ಕಲಘಟಗಿ,** ಈ ಪ್ರಕರಣದಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು ಈ ಕೆಳಗಿನಂತೆ ಹೇಳಿರುತ್ತದೆ.

> **“Section 16 bars the jurisdiction of the Civil Court even to entertain a suit or a proceedings. Even if it is for prohibiting the eviction, a person filed any suit in Civil Court, the mandate of law is that it shall not be entertained nor any proceeding of such nature shall be entertained by Civil Court. The expression un-authorized occupation has also been defined in the Act that it includes even continuation of occupation of a person in public premises after the authority under which he was allowed to occupy the premises has expired. In view of bar under Section 16 of the Act, and even if he is in possession, his possession cannot be termed as lawful or authorized possession for being entitled for granting of injunction. In this view of the matter, the learned Courts below did not commit any error of jurisdiction in rejecting the applicant’s application for temporary injunction as well as in dismissing the appeal taking the view that suit perse is not maintainable, and there is no prima facie case for grant of temporary injunction in favour of the applicant”.**

**2) ಎ ಐ ಆರ್ 1992 ಪಿ ಅಂಡ್ ಹೆಚ್ 248 ಮೆ.ಭಾರತ್ ಪೆಟ್ರೋಲಿಯಂ ಕಾರ್ಪೋರೇಶನ್ ಲಿ. ವಿರುದ್ಧ ಯೂನಿಯನ್ ಆಫ್ ಇಂಡಿಯಾ,** ಈ ಪ್ರಕರಣದಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು ಈ ಕೆಳಗಿನಂತೆ ಹೇಳಿರುತ್ತದೆ.

> **Section 15 of the Act bars the jurisdiction of the Civil Court to entertain a suit or any proceeding in respect of the eviction of any person, who is in unauthorized**

**occupation of a public premises. In view thereof, the action of respondents Nos.2 and 3 in initiating proceedings under the Act was legal and valid.**

21. ವಾದಿಯರ ಪರ ವಕೀಲರು ತಮ್ಮ ವಾದ ಮಂಡನೆಗೆ ಪೂರಕವಾಗಿ **ಮಾನ್ಯ ಗುಜರಾತ್ ಉಚ್ಚ ನ್ಯಾಯಾಲಯವು ದಿನಾಂಕ 20-01-2021** ರಂದು **ಯುನಿಯನ್ ಆಫ್ ಇಂಡಿಯಾ - ವಿರುದ್ಧ - ಬಾಗುಭಾಯಿ ವಿತ್ತಲಭಾಯಿ ಪಟೇಲ್** ಪ್ರಕರಣದಲ್ಲಿ ನೀಡಿರುವ ತೀರ್ಪುಜನ್ಯವನ್ನು ಹಾಜರುಪಡಿಸಿರುತ್ತಾರೆ.

ಈ ಮೇಲಿನ ತೀರ್ಪುಜನ್ಯಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ ಸದರಿ ತೀರ್ಪುಜನ್ಯಗಳಲ್ಲಿರುವ ವಸ್ತುಸ್ಥಿತಿಗಳು ಮತ್ತು ಈ ಪ್ರಸ್ತುತ ಪ್ರಕರಣದಲ್ಲಿರುವ ವಸ್ತುಸ್ಥಿತಿಗಳು ಬೇರೆ ಬೇರೆ ಆಗಿರುತ್ತದೆ ಮತ್ತು ಈ ದಾವೆಯಲ್ಲಿ ದಾವಾ ಆಸ್ತಿಯು ಸಾರ್ವಜನಿಕ ಆಸ್ತಿ/ಸರ್ಕಾರಿ ಆಸ್ತಿ (ಸಾರ್ವಜನಿಕ ಆವರಣ) ಎಂಬುದರ ಕುರಿತು ವಿವಾಧ ಇರುತ್ತದೆ. ಹಾಗಾಗಿ ಈ ಮೇಲಿನ ತೀರ್ಪುಜನ್ಯಗಳು ಈ ಪ್ರಸ್ತುತ ಪ್ರಕರಣಕ್ಕೆ ಅನ್ವಯಿಸುವುದಿಲ್ಲ ಎಂಬುದು ನ್ಯಾಯಾಲಯದ ಅಭಿಪ್ರಾಯವಾಗಿರುತ್ತದೆ.

22. ಈ ಮೇಲ್ಕಂಡ ಎಲ್ಲಾ ವಿಶ್ಲೇಷಣೆಯಿಂದಾಗಿ ವಾದ ಪತ್ರವನ್ನು ಪರಿಶೀಲಿಸಲಾಗಿ ವಾದಿಯರು ಸಲ್ಲಿಸಿರುವ ದಾವೆಯು ಯಾವುದೇ ಕಾನೂನಿನ ಮೂಲಕ ಪ್ರತಿಬಂಧಿತವಾಗದೆ ಇರುವುದರಿಂದ ವಾದ ಪತ್ರವನ್ನು ತಿರಸ್ಕರಿಸಲು ಬರುವುದಿಲ್ಲವೆಂದು ನ್ಯಾಯಾಲಯ ತೀರ್ಮಾನಕ್ಕೆ ಬರುತ್ತದೆ. ಆದ್ದರಿಂದ ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ಪರಿಶೀಲಿಸಿ ಪ್ರತಿವಾದಿಯರು ಮಧ್ಯಂತರ ಅರ್ಜಿ ಸಂಖ್ಯೆ V ರಲ್ಲಿ ಕೋರಿರುವಂತೆ ವಾದಿಯರ ವಾದ ಪತ್ರವನ್ನು ತಿರಸ್ಕೃತಗೊಳಿಸಲು ಬರುವುದಿಲ್ಲವೆಂದು ನಿರ್ಣಯಿಸಿ ಅಂಶ 1 ನ್ನು ನಕಾರಾತ್ಮಕ ಎಂದು ನಿರ್ಣಯಿಸಲಾಗುತ್ತದೆ.

**23. ಅಂಶ.2:-** ಮೇಲ್ಕಾಣಿಸಿದ ಎಲ್ಲಾ ಕಾರಣಗಳಿಂದಾಗಿ ಈ ಕೆಳಕಾಣಿಸಿದಂತೆ ಆದೇಶಿಸಿರುತ್ತೇನೆ:-

## ಆ ದೇ ಶ

ಪ್ರತಿವಾದಿಯರು/ಅರ್ಜಿದಾರರು ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 7 ನಿಯಮ 11(ಡಿ) ಸಹವಾಚಕ ಕಲಂ 151 ಮತ್ತು ಸಾರ್ವಜನಿಕ ಆವರಣ(ಅನಧಿಕೃತ ನಿವಾಸಿಗಳ ತೆರವು)ಕಾಯಿದೆ 1971 ಕಲಂ 16 ರ ಅಡಿಯಲ್ಲಿ ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆಃV ನ್ನು ತಿರಸ್ಕರಿಸಲಾಗಿದೆ.

ಖರ್ಚಿನ ಬಗ್ಗೆ ಯಾವುದೇ ಆದೇಶವಿಲ್ಲ.

(ಈ ಆದೇಶವನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಕಂಪ್ಯೂಟರ್ ಮೂಲಕ ಉಕ್ತಲೇಖನ ಕೊಟ್ಟು, ಅವರು ಬೆರಳಚ್ಚು ಮಾಡಿದ ನಂತರ, ಓದಿ ತಿದ್ದಿ, ಪ್ರತಿ ತೆಗೆದು ಬಹಿರಂಗ ನ್ಯಾಯಾಲಯದಲ್ಲಿ ದಿನಾಂಕಃ 11 ನೇ ಫೆಬ್ರವರಿ 2022 ರಂದು ನಾನು ಉದ್ಘೋಷಿಸಿದ್ದೇನೆ.)

-ಸಹಿ -
(ಈರಪ್ಪ ಢವಳೇಶ್ವರ್)
2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ., ಕಡೂರು.